## 2 ನೇ ಹೆಚ್ಚುವರಿ ಪ್ರಥಮ ದರ್ಜೆಯ  ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು

**ಸಿ.ಸಿ ನಂ.892-2018** **ಡಿ. ಡಬ್ಲುಃ 1**

| | |
|---|---|
| ಸಾಕ್ಷಿದಾರರ ಹೆಸರು<br>ವಾಸ್ತವ್ಯ | ದೊಡ್ಡೇಗೌಡ<br>ತಾಂಡವಪುರ ಗ್ರಾಮ, ನಂಜನಗೂಡು ತಾ. |
| | **ಸತ್ಯ ಪ್ರತಿಜ್ಞೆಯ ಮೇರೆಗೆ  ದಿನಾಂಕ 24-02-2025.** |

**ಪಾಟೀ ಸವಾಲುಃ ಪಿರ್ಯಾದಿ ಪರ  ಶ್ರೀ ಸಿ.ಎಸ್.ಎಂ  ವಕೀಲರಿಂದಃ**

ನಾನು ಕೆ.ಎಸ್.ಆರ್.ಟಿ.ಸಿ ನೌಕರ ಎಂದರೆ ಸರಿ. ಪಿರ್ಯಾದಿದಾರರು ನಮ್ಮ ಊರಿನವರೇ ಎಂದರೆ ಸರಿ. ನಾನು ಮತ್ತು ಪಿರ್ಯಾದಿದಾರರ ಒಂದೇ ಊರಿನವರಾಗಿರುವುದರಿಂದ ಪರಿಚಿತರು ಎಂದರೆ ಸರಿ. ನನ್ನ ಮತ್ತು ಪಿರ್ಯಾದಿದಾರರ ನಡುವೆ ಹಣಕಾಸಿನ ವ್ಯವಹಾರ ಇತ್ತು  ಎಂದರೆ ಸರಿಯಲ್ಲ. ನಾನು ಪಿರ್ಯಾದಿದಾರರಿಂದ 2016 ರಲ್ಲಿ ರೂ.1,00,000/- ಗಳನ್ನು ಸಾಲವಾಗಿ ಪಡೆದುಕೊಂಡು ಸದರಿ ಹಣವನ್ನು 2017 ರಲ್ಲಿ ಮರುಪಾವತಿ ಮಾಡಿರುತ್ತೇನೆ. ನಿಪಿ-1 ಚೆಕ್ ಮತ್ತು ಅದರಲ್ಲಿನ ಸಹಿ ನನ್ನದೇ ಆಗಿರುತ್ತದೆ. ದಿ.06-04-2018 ಎಂದು ನಮೂದಿಸಿ ಚೆಕ್ಕನ್ನು ನೀಡಿರುತ್ತೇನೆ  ಎಂದರೆ ಸರಿಯಲ್ಲ.  ಸಾಕ್ಷಿ ಮುಂದುವರೆದು ನಾನು ಸಹಿ ಮಾಡಿ ಚೆಕ್ಕನ್ನು ನೀಡಿದ್ದು, ಆದರೆ

ದಿನಾಂಕವನ್ನು ನಮೂದು ಮಾಡಿರುವುದಿಲ್ಲ. ನಾನು 2018 ರಲ್ಲಿ ಪಿರ್ಯಾದಿದಾರರಿಗೆ ಚೆಕ್ಕನ್ನು ನೀಡಿ ಅವರಿಂದ ರೂ.2,50,000/- ಗಳನ್ನು ಸಾಲವಾಗಿ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಪಿರ್ಯಾದಿದಾರರ ನೀಡಿದ ನೋಟಿಸಿಗೆ ಪ್ರತ್ಯುತ್ತರವನ್ನು ನೀಡಿರುತ್ತೇನೆ. ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರಬಹುದು. ಸದರಿ ಜವಾಬು ನೋಟಿಸಿನಲ್ಲಿ ನಾನು 2016 ರಲ್ಲಿ ಪಿರ್ಯಾದಿದಾರರಿಂದ ಸಾಲವಾಗಿ ಹಣ ಪಡೆದು ಅದನ್ನು 2017 ರಲ್ಲಿ ಮರುಪಾವತಿ ಮಾಡಿದ ಬಗ್ಗೆ ನಮೂದು ಮಾಡಿದ್ದೇನೆ ಇಲ್ಲವೇ ಎಂದು ನೆನಪಿಲ್ಲ. ನಾನು ಪಿರ್ಯಾದಿದಾರರಿಂದ ಸಾಲವಾಗಿ ಹಣ ಪಡೆದಿದ್ದರೂ ಸಹ ಅದನ್ನು ಮರುಪಾವತಿ ಮಾಡುವ ಬಾಧ್ಯತೆಯಿಂದ ತಪ್ಪಿಸಿಕೊಳ್ಳುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ಮುಂದುವರೆದ ಪಾಟೀ ಸವಾಲಿಗೆ ಪಿರ್ಯಾದಿ ಪರ ವಕೀಲರು ಸಮಯಾವಕಾಶವನ್ನು ಕೋರಿದ್ದು ಸಮಯಾವಕಾಶವನ್ನು ನೀಡಲಾಯಿತು)

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಸಹಿ/-**

**2 ನೇ ಕಿ.ಪ್ರ.ದ. ನ್ಯಾ ದಂ. ನಂಜನಗೂಡು**